**O.S. 282-17 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R G D, ವಕೀಲರಿಂದಃ**

4. ನಿಪಿ.1 ರಿಂದ 7 ರಲ್ಲಿ ಹಿಂದುಗಡೆಗೆ ಸದರಿ ನಂಬರದಲ್ಲಿ ಇನ್ನು ಬೇರೆ ಮಾಲಿಕರ ಹೆಸರು ಇರುತ್ತದೆ ಎಂದು ಶರಾ ಇದೆ ಅಂದರೆ ಸರಿ. ಇನ್ನು ಬೇರೆ ಯಾರು ಮಾಲಿಕರು ಅಂತಾ ನಿಪಿ.1 ರಿಂದ 7 ದಾಖಲೆ ಬಿಟ್ಟರೆ ಬೇರೆ ದಾಖಲೆ ಹಾಜರಪಡಿಸಿಲ್ಲ. ಏಕೆಂದರೆ ಅದರ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಶೆಡ್ಯೂಲ್ - ಬಿ, 1 ರಿಂದ ರ ಆಸ್ತಿಗಳು ತಾಡಪತ್ರಿಗಲ್ಲಿಯಲ್ಲಿ ಇವೆ ಅಂದರೆ ಸರಿ. ಶೆಡ್ಯೂಲ್ - ಬಿ, 1 ರಿಂದ 6 ರಲ್ಲಿರುವ ಆಸ್ತಿಗಳನ್ನು ಕೆಡವಿ ಬಸವರಾಜ ಅವಿನ್ಯೂ ಅಂತಾ ಅಪಾರ್ಟಮೆಂಟ ಕಟ್ಟಿದ್ದೇವೆ ಅಂದರೆ ಸರಿ. ಈಗ ಸದರಿ ಕಟ್ಟಡಕ್ಕೆ ಸಂಬಂಧಪಟ್ಟಂತೆ ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ಸಾಕ್ಷಿಯೂ ಹೌದು ಎಂದು ಒಪ್ಪಿಕೊಂಡಿದ್ದರಿಂದ ಸದರಿ ಪೋಟೋಗಳನ್ನು ನಿಡಿ.1 ಹಾಗೂ 2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಶೆಡ್ಯೂಲ್ - ಬಿ ಅನುಕ್ರಮ ನಂಃ 1 ರ ಸಿಟಿಎಸ್ ನಂಃ 931 ರ ದೃಢೀಕೃತ ಪ್ರತಿ ನೋಡಿ ಅದರಲ್ಲಿರುವ ಹೆಸರುಗಳನ್ನು ನೋಡಿ ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಡಿ.3 ರಲ್ಲಿರುವ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಈಗ ಸಾಕ್ಷಿಗೆ ಸಿಟಿಎಸ್ ನಂಃ 932 ರ ದೃಢೀಕೃತ ಪ್ರತಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.4 ಎಂದು ಗುರುತಿಸಲಾಯಿತು. ನಿಡಿ.4 ರಲ್ಲಿರುವ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಸಿಟಿಎಸ್ ನಂಃ 933 ರ ಮುಟೇಶನ್ ದೃಢೀಕೃತ ಪ್ರತಿ ತೋರಿಸಲಾಗಿ, ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು. ನಿಡಿ.5 ರಲ್ಲಿರುವ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಸಿಟಿಎಸ್ ನಂಃ 934 ರ ಮುಟೇಶನ್ ದೃಢೀಕೃತ ಪ್ರತಿ ತೋರಿಸಲಾಗಿ, ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ನಿಡಿ.6 ಎಂದು ಗುರುತಿಸಲಾಯಿತು. ನಿಡಿ.6 ರಲ್ಲಿರುವ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಸಿಟಿಎಸ್ ನಂಃ 935 ಹಾಗೂ 936 ರ ಮುಟೇಶನ್ ದೃಢೀಕೃತ ಪ್ರತಿ ತೋರಿಸಲಾಗಿ, ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ನಿಡಿ.7 ಹಾಗೂ ನಿಡಿ.8 ಎಂದು ಗುರುತಿಸಲಾಯಿತು. ನಿಡಿ.7 ಹಾಗೂ ನಿಡಿ.8 ರಲ್ಲಿರುವ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ.

**O.S. 282-17 PW : 1**

ಸಿಟಿಎಸ್ ನಂಃ 931 ರಿಂದ 936 ರಲ್ಲಿರುವ ಆಸ್ತಿಗಳನ್ನು ಕೆಡವಿ ಬಸವರಾಜ ಅವಿನ್ಯೂ ಅಂತಾ ಅಪಾರ್ಟಮೆಂಟ ಕಟ್ಟಿಸಿ ಅದರಲ್ಲಿರುವ ಎಲ್ಲ ಮನೆಗಳನ್ನು ಮಾರಾಟ ಮಾಡಲಾಗಿದೆ ಅಂದರೆ ಸರಿಯಲ್ಲ. ಅಪಾರ್ಟಮೆಂಟ ಕಟ್ಟಿದ ನಂತರ ಪ್ಲಾಟ್ ನಂಬರ ಹಾಗೂ ಹೌಸ್ ನಂಬರ ಎಂದು ಕೊಡುತ್ತಾರೆ ಅಂದರೆ ಸರಿ. ನಾನು ಯಾವ ಮನೆ ಹಾಗೂ ಫ್ಲ್ಯಾಟ್ ಮಾರಾಟವಾಗಿಲ್ಲವೆಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. ಬೇಸಮೆಂಟ ಪಾರ್ಕಿಂಗ ಏರಿಯಾಕ್ಕೆ ನಮ್ಮ ಮಾಲಿಕರ ಹೆಸರು ಇದೆ, ಅಲ್ಲಿ ಯಾವ ಆಸ್ತಿಗಳು ಉಳಿದಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ಭಾಡಿಗೆ ತೆಗೆದುಕೊಳ್ಳುತ್ತಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.